## 2015 ಕ.ತೀ.ವ. 283

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎಲ್. ಮಂಜುನಾಥ್
### ಮತ್ತು
### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ

### ಆಂಧ್ರ ಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮ –ವಿರುದ್ಧ– ಶ್ರೀ ರತ್ನಾಕರ್ *

ಮೋಟಾರು ವಾಹನಗಳ ಅಧಿನಿಯಮದ 173(1)ನೇ ಪ್ರಕರಣದಡಿಯಲ್ಲಿನ ಅಪೀಲು.

ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸು ತಿರುವು ಪಡೆದುಕೊಳ್ಳುವಾಗ ಎದುರಿನಿಂದ ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದು ಕ್ಲೇಮುದಾರರು ಗಾಯಗೊಂಡರು, ನ್ಯಾಯಾಧಿಕರಣವು ನೀಡಿದ ಒಂದೇ ಬಗೆಯ ತೀರ್ಪನ್ನು ಪ್ರಶ್ನಿಸಿ ಕ್ಲೇಮುದಾರನು ನಷ್ಟಪರಿಹಾರವನ್ನು ಹೆಚ್ಚಿಸುವಂತೆ ಮೇಲ್ಮನವಿ ಸಲ್ಲಿಸುತ್ತಾನೆ. ಅದನ್ನು ಪ್ರಶ್ನಿಸಿ ವಿಮಾಕಂಪನಿಯೂ ಸಹಾ ಸಂಕೀರ್ಣ ಮೊದಲ ಅಪೀಲನ್ನು ಸಲ್ಲಿಸಿದೆ.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಅನುಸಾರವಾಗಿ ಮೃತನ ಕ್ಲೇಮುದಾರರು ಜೀವವಿಮಾ ಪಾಲಿಸಿಯಿಂದ ಪಡೆದುಕೊಂಡ ಹಣವನ್ನು ಮೋಟಾರು ವಾಹನಗಳ ಅಧಿನಿಯಮದ ಮೇರೆಗಿನ ನಷ್ಟಪರಿಹಾರದ ಮೊತ್ತದಲ್ಲಿ ಕಡಿತಗೊಳಿಸಲು ಬರುವುದಿಲ್ಲವೆಂದು ಹಾಗೂ ಅಪಘಾತದ ನಷ್ಟಪರಿಹಾರದ ಇತರ ಶೀರ್ಷಿಕೆಗಳಡಿಯಲ್ಲಿ ಅಂದರೆ 'ವೈದ್ಯಕೀಯ ವೆಚ್ಚ' ವನ್ನು ಇತರೆ ವಿಮೆಯ ಮೂಲಕ ಪಡೆದುಕೊಂಡಿದ್ದಲ್ಲಿ ಅಪಘಾತದ ನಷ್ಟಪರಿಹಾರದಲ್ಲಿ ಅದನ್ನು ಕಡಿತಗೊಳಿಸಬಹುದೆಂದು ಅಭಿಪ್ರಾಯಪಟ್ಟು, ಸದರಿ ಮೊಕದ್ದಮೆಯಲ್ಲಿ ಕ್ಲೇಮುದಾರನು ಅಂಥ ವಿಮೆಯಡಿ ವೈದ್ಯಕೀಯ ವೆಚ್ಚ

* ಎಂ.ಎಫ್.ಎ. ಸಂ. 8541/2012 ಹಾಗೂ ಇತರೆ, ದಿನಾಂಕ: 13ನೇ ಅಕ್ಟೋಬರ್, 2014.

**ಪಡೆದುಕೊಂಡಿದ್ದಾನೆಂದು ವಿಮಾದಾರನು ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸದ ಕಾರಣದಿಂದಾಗಿ ನಷ್ಟಪರಿಹಾರವನ್ನು ಹೆಚ್ಚಿಸಿ ವಿಮಾದಾರನ ಸಂಕೀರ್ಣ ಮೊದಲನೇ ಅರ್ಜಿಯನ್ನು ವಜಾಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಐಎಲ್‌ಆರ್ 2008 ಕರ್ನಾ. 3277*
*ಶಾಹಿದ್ ಅಹ್ಮದ್ –ವಿರುದ್ಧ–*
*ಶಂಕರ ನಾರಾಯಣ ಭಟ್* *(ಉಲ್ಲೇ) 5*

*2. 1999 ಎಸಿಜೆ 10*
*ಹೆಲನ್ ಸಿ. ರೆಬೆಲೋ –ವಿರುದ್ಧ–*
*ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ* *(ಉಲ್ಲೇ) 6*

*3. 2002 ಎಸಿಜೆ 154*
*ಬಿ. ಪರಿಮಳ ಮತ್ತು ಇತರರು –ವಿರುದ್ಧ–*
*ರಿಯಾಜ್ ಅಹ್ಮದ್ ಮತ್ತು ಇತರರು* *(ಉಲ್ಲೇ) 7*

*4. ಎಐಆರ್ 2011 ಎಸ್‌ಸಿ 2951*
*ರಾಮಚಂದ್ರಪ್ಪ –ವಿರುದ್ಧ– ಮ್ಯಾನೇಜರ್, ರಾಯಲ್*
*ಸುಂದರಮ್ ಅಲೈನ್ಸ್ ವಿಮಾಕಂಪನಿ ನಿಯಮಿತ* *(ಉಲ್ಲೇ) 9*

ಅಪೀಲುದಾರರ ಪರ : ಶ್ರೀ ಡಿ. ವಿಜಯ ಕುಮಾರ್ – ವಕೀಲರು ;
ಪ್ರತ್ಯಪೀಲುದಾರರ ಪರ : ಶ್ರೀಮತಿ ಸುಗುಣ ಆರ್. ರೆಡ್ಡಿ – ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ರವಿ ಮಳಿಮಠ :**

ಕ್ಲೇಮುದಾರನ ಮೊಕದ್ದಮೆಯೆಂದರೆ, ದಿನಾಂಕ 24.7.2008ರಂದು ಸುಮಾರು 4.30ರಲ್ಲಿ, ಎಪಿ–10–ಜೆಡ್ 5512 ನೋಂದಣಿ ಸಂಖ್ಯೆಯನ್ನು ಹೊಂದಿದ್ದ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ನ ಚಾಲಕನಾಗಿದ್ದ ಬಿ.ಎ.ಕುಮಾರಸ್ವಾಮಿ ಎನ್ನುವವನು ನೆಲ್ಲಿಪಟ್ಟ –ಕೊಲಮಸನಪಲ್ಲಿ ರಸ್ತೆಯಲ್ಲಿ ಅದನ್ನು ಅತಿಯಾದ ವೇಗ ಮತ್ತು ನಿರ್ಲಕ್ಷ್ಯದ ರೀತಿಯಲ್ಲಿ ಚಾಲನೆ ಮಾಡುತ್ತಿದ್ದು ಒಂದು ತಿರುವಿನಲ್ಲಿ ಆತನು ತಪ್ಪಾದ ದಿಕ್ಕಿನಲ್ಲಿ ಅಂದರೆ ರಸ್ತೆಯ ಬಲಬದಿಯಿಂದ ಬಸ್ಸನ್ನು ಓಡಿಸಿ ಎದುರು ದಿಕ್ಕಿನಿಂದ ಬರುತ್ತಿದ್ದ ಕೆಎ–03–ಎಂಸಿ–7788 ನೋಂದಣಿ ಸಂಖ್ಯೆಯನ್ನು ಹೊಂದಿದ್ದ ಮಾರುತಿ ವ್ಯಾನಿಗೆ ಡಿಕ್ಕಿ ಹೊಡೆದಿದ್ದಾನೆ. ಅಪಘಾತದ ಕಾರಣದಿಂದಾಗಿ ಮಾರುತಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದವರು ತೀವ್ರತರವಾಗಿ ಗಾಯಗೊಂಡರು.

2. ಈ ಮೊಕದ್ದಮೆಯಲ್ಲಿ ಕ್ಲೇಮುದಾರರಾದ ರತ್ನಾಕರ್ ತನಗಾದ ಗಾಯಗಳಿಗಾಗಿ ನಷ್ಟಪರಿಹಾರವನ್ನು ಕೋರಿ ಎಂ.ವಿ.ಸಿ. ಸಂ. 9272/2008ನ್ನು ಸಲ್ಲಿಸಿದ್ದಾನೆ. ಕಾರಿನಲ್ಲಿದ್ದ ಇತರ ಸಹ ಪ್ರಯಾಣಿಕರು ಸಹಾ ಪ್ರತ್ಯೇಕ ಕ್ಲೇಮು ಅರ್ಜಿಗಳನ್ನು ಸಲ್ಲಿಸಿದ್ದಾರೆ.

3. ನ್ಯಾಯಾಧಿಕರಣವು, ಎಲ್ಲ ಕ್ಲೇಮು ಅರ್ಜಿಗಳನ್ನು ಒಟ್ಟಿಗೇ ಸುನಾವಣೆ ಮಾಡಿತ್ತು ಮತ್ತು ಒಂದೇ ರೀತಿಯಾದ ತೀರ್ಪು ಮತ್ತು ಐತೀರ್ಪನ್ನು ಹೊರಡಿಸಿತ್ತು. ಅಪೀಲುದಾರನ ಎಂ.ಎಫ್.ಎ. ಸಂ. 9190/2012 ಕ್ಲೇಮು ಅರ್ಜಿಯನ್ನು ಭಾಗಶಃ ಅಂಗೀಕರಿಸಿ, ಕ್ಲೇಮು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ನಗದೀಕರಣದ ದಿನಾಂಕದವರೆಗೂ ವಾರ್ಷಿಕ ಶೇಕಡ 6ರ ದರದ ಬಡ್ಡಿಯೊಂದಿಗೆ 1,76,200/– ರೂ.ಗಳ ಒಟ್ಟು ನಷ್ಟಪರಿಹಾರವನ್ನು ನೀಡುವಂತೆ ಐತೀರ್ಪು ನೀಡಿತ್ತು.

ನಷ್ಟಪರಿಹಾರವನ್ನು ಹೆಚ್ಚಳ ಮಾಡುವಂತೆ ಕೋರಿ ಕ್ಲೇಮುದಾರನು, ಎಂ.ಎಫ್.ಎ. ಸಂ. 9190/2012ನ್ನು ಸಲ್ಲಿಸಿದ್ದನು. ಹೊಣೆಗಾರಿಕೆಯನ್ನು ಮತ್ತು ಹೆಚ್ಚಿನ ನಷ್ಟಪರಿಹಾರ ನೀಡಬೇಕಿರುವುದನ್ನು ಪ್ರಶ್ನಿಸಿ ವಿಮಾದಾರನು ಎಂ.ಎಫ್.ಎ. ಸಂ. 8451/2012ನ್ನು ಸಲ್ಲಿಸಿದ್ದಾನೆ.

4. ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದೆ.

5. ನ್ಯಾಯಾಧಿಕರಣವು ***ಶಾಹಿದ್ ಅಹ್ಮದ್ –ವಿರುದ್ಧ– ಶಂಕರ ನಾರಾಯಣ ಭಟ್*** [1]**,** ಮೊಕದ್ದಮೆಯಲ್ಲಿ ವರದಿಯಾದ ತೀರ್ಪನ್ನು ಅವಲಂಬಿಸಿದೆ ಮತ್ತು ಕ್ಲೇಮುದಾರರು, ಯಾವುದೇ ಆರೋಗ್ಯ ವಿಮೆಯನ್ನು ಮರುಭರ್ತಿ ಮಾಡಿಕೊಂಡಿದ್ದಾಗ್ಯೂ ಇಡೀ ವೈದ್ಯಕೀಯ ವೆಚ್ಚಗಳಿಗೆ ಹಕ್ಕುಳ್ಳವರಾಗಿರುತ್ತಾರೆಂದು ಅಭಿಪ್ರಾಯಪಟ್ಟಿದೆ. ಆದಾಗ್ಯೂ, ಆಸ್ಪತ್ರೆಯ ಬಿಲ್ಲುಗಳನ್ನು ಆರೋಗ್ಯ ವಿಮಾಕಂಪನಿಯಿಂದ ಭರಿಸಲಾಗಿದೆಯೆಂಬ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದಿರುವುದರಿಂದ ಕ್ಲೇಮುದಾರರಿಗೆ ವೈದ್ಯಕೀಯ ವೆಚ್ಚ ಸಲುವಾಗಿ 50,000/– ರೂ.ಗಳ ಮೊತ್ತದ ಐತೀರ್ಪು ನೀಡಲಾಗಿದೆ. ಹಾಗಾಗಿ, ವೈದ್ಯಕೀಯ ವೆಚ್ಚಗಳ ಸಂಪೂರ್ಣ ಮೊತ್ತದ ಐತೀರ್ಪು ನೀಡುವಂತೆ ಕ್ಲೇಮು ಮಾಡಿದ್ದಾರೆ.

6. ಮತ್ತೊಂದುಕಡೆ, ವಿಮಾ ಕಂಪನಿಯ ಪರವಾಗಿ ಹಾಜರಾದ ಮಾನ್ಯ ವಕೀಲರು, ***ಹೆಲನ್ ಸಿ.ರೆಬೆಲೋ –ವಿರುದ್ಧ– ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ನಿಗಮ*** [2]**,** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸಿ ಈ ಮೊಕದ್ದಮೆಗೆ ಅದು ಅನ್ವಯಿಸುವುದೆಂದು ವಾದಿಸುತ್ತಾ, ವೈದ್ಯಕೀಯ ವೆಚ್ಚ ಇತರೆಗಳನ್ನು ಸ್ವೀಕರಿಸಿದ್ದಲ್ಲಿ, ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಐತೀರ್ಪನ್ನು ನೀಡುವಾಗ ಆ ಮೊತ್ತವನ್ನು ಕಡಿತಗೊಳಿಸುವುದು ಅಗತ್ಯವೆಂದು ವಾದಿಸಿದ್ದಾರೆ.

---

1. ಐಎಲ್ಆರ್ 2008 ಕರ್ನಾ. 3277
2. 1999 ಎಸಿಜೆ 10

7. ***ಹೆಲನ್ ಸಿ.ರೆಬೆಲೋ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಸ್ವೀಕರಿಸುವ ಕ್ಲೇಮುದಾರರ ನಷ್ಟಪರಿಹಾರದಿಂದ ಜೀವವಿಮಾ ಹಣವನ್ನು ಕಡಿತಗೊಳಿಸಬಹುದೆ ಎಂಬ ಪ್ರಶ್ನೆಯ ಬಗ್ಗೆ ವ್ಯವಹರಿಸಿದೆ. ಮೃತನ ಜೀವವಿಮೆಯಿಂದ ಕ್ಲೇಮುದಾರರು ಸ್ವೀಕರಿಸುವ ಮೊತ್ತವನ್ನು ಮೋಟಾರು ವಾಹನಗಳ ಅಧಿನಿಯಮದ ಮೇರೆಗೆ ಲೆಕ್ಕಹಾಕಲಾಗುವ ನಷ್ಟಪರಿಹಾರದ ಮೊತ್ತದಿಂದ ಕಡಿತಗೊಳಿಸಬಾರದೆಂದು ಅಭಿಪ್ರಾಯಪಟ್ಟಿದೆ. ಆದಾಗ್ಯೂ, ***ಶಾಹೀದ್ ಅಹ್ಮದ್*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಮಾನ್ಯ ಏಕಸದಸ್ಯಪೀಠ ನ್ಯಾಯಾಧೀಶರು, ***ಹೆಲೆನ್ ಸಿ. ರೆಬೆಲೋ*** ಮೊಕದ್ದಮೆಯಲ್ಲಿನ ತೀರ್ಪು ಹಾಗೂ ಈ ನ್ಯಾಯಾಲಯದ ವಿಭಾಗೀಯ ಪೀಠದ ***ಬಿ. ಪರಿಮಳ ಮತ್ತು ಇತರರು –ವಿರುದ್ಧ– ರಿಯಾಜ್ ಅಹ್ಮದ್ ಮತ್ತು ಇತರರು***[3]**,** ಮೊಕದ್ದಮೆಯಲ್ಲಿನ ಆದೇಶದ ಮೇಲೆ ಅವಲಂಬಿತರಾಗಿದ್ದಾರೆ. ಇದರಲ್ಲಿ ವಿಭಾಗೀಯ ಪೀಠವು ***ಹೆಲನ್ ಸಿ.ರೆಬೆಲೊ*** ಮೊಕದ್ದಮೆಯಲ್ಲಿನ ತೀರ್ಪನ್ನು ಅನುಸರಿಸಿದೆ ಮತ್ತು ಜೀವವಿಮೆಯ ಮೊತ್ತವನ್ನು ಕಡಿತಗೊಳಿಸುವುದು ಅಸಮರ್ಥನೀಯವೆಂದು ಎತ್ತಿಹಿಡಿದಿದೆ. ವಿಭಾಗೀಯ ಪೀಠದ ತೀರ್ಪನ್ನು ಅಂತೆಯೇ ***ಹೆಲನ್ ಸಿ. ರೆಬೆಲೋ*** ಮೊಕದ್ದಮೆಯಲ್ಲಿನ ತೀರ್ಪನ್ನು ಅನುಸರಿಸಿ ಮಾನ್ಯ ಏಕಸದಸ್ಯಪೀಠದ ನ್ಯಾಯಾಧೀಶರು ***ಶಾಹಿದ್ ಅಹ್ಮದ್*** ಮೊಕದ್ದಮೆಯಲ್ಲಿ ಇರುವ ತತ್ವಗಳನ್ನು ಅನ್ವಯಿಸಿದ್ದಾರೆ ಮತ್ತು ತದನುಸಾರವಾಗಿ, 'ವೈದ್ಯಕೀಯ ವೆಚ್ಚ'ಗಳನ್ನು ಕಡಿತಗೊಳಿಸಬಾರದೆಂದು ಎತ್ತಿ ಹಿಡಿದಿದ್ದಾರೆ. ಮೆಡಿ–ಕ್ಲೇಮು ಮೂಲಕ ಯಾವುವೇ ಸಂದಾಯಗಳನ್ನು ಸ್ವೀಕರಿಸಿದ್ದಾಗ್ಯೂ ವೈದ್ಯಕೀಯ ವೆಚ್ಚಗಳನ್ನು ಮರುಪಾವತಿ ಮಾಡುವುದಕ್ಕೆ ವಿಮಾ ಕಂಪನಿಯು ಬದ್ಧವಾಗಿರುತ್ತದೆಂದು ಅಭಿಪ್ರಾಯಪಟ್ಟಿದೆ.

8. ***ಶಾಹೀದ್ ಅಹ್ಮದ್*** ಮೊಕದ್ದಮೆಯಲ್ಲಿನ ತೀರ್ಪನ್ನು ಒಪ್ಪಿಕೊಳ್ಳುವುದಕ್ಕೆ ನಮಗೆ ಸಾಧ್ಯವಿಲ್ಲ. ***ಹೆಲನ್ ಸಿ. ರೆಬೆಲೋ*** ಮೊಕದ್ದಮೆಯಲ್ಲಿ ಪರಿಗಣನೆಗಾಗಿನ ಪ್ರಶ್ನೆಯು ಜೀವವಿಮಾ ಪಾಲಿಸಿಯ ಸಂಬಂಧದಲ್ಲಿನ ಮುರುಗಡೆಯ ಬಗೆಯದ್ದಾಗಿತ್ತು. ***ಶಾಹಿದ್ ಅಹ್ಮದ್*** ಮೊಕದ್ದಮೆಯಲ್ಲಿನ ಮಾನ್ಯ ಏಕಸದಸ್ಯಪೀಠ ನ್ಯಾಯಾಧೀಶರಿಂದ

3. 2002 ಎಸಿಜೆ 154

ಪರಿಗಣಿತವಾಗಿರುವುದು 'ವೈದ್ಯಕೀಯ ವೆಚ್ಚಗಳ ಬಗೆಗಿನ ಪ್ರಶ್ನೆಯಾಗಿದೆ. ***ಹೆಲನ್ ಸಿ.ರೆಬೆಲೋ*** ಮೊಕದ್ದಮೆಯಲ್ಲಿ ಜೀವವಿಮಾ ಪಾಲಿಸಿಯ ಕಡಿತವನ್ನು ಗಂಭೀರವಾಗಿ ಪರಿಗಣಿಸಲಾಗಿತ್ತು. ಜೀವವಿಮಾ ಪಾಲಿಸಿಯ ಹೊರತಾಗಿ ಕ್ಲೇಮುದಾರರಿಂದ ಸ್ವೀಕರಿಸಲಾದ ಆರ್ಥಿಕ ಅನುಕೂಲತೆಗಳನ್ನು ಅಪಘಾತದಲ್ಲಿ ಮೃತಪಟ್ಟಿದ್ದಕ್ಕಾಗಿ ಲೆಕ್ಕಹಾಕಲಾದ ನಷ್ಟಪರಿಹಾರದೊಂದಿಗೆ ಪರಸ್ಪರ ಸಂಬಂಧ ಕಲ್ಪಿಸಬಾರದೆಂದು ಅಭಿಪ್ರಾಯಪಟ್ಟಿತ್ತು. ಅಪಘಾತದಲ್ಲಿನ ಮರಣದ ಕಾರಣದಿಂದ ಮಾತ್ರವಲ್ಲದೇ ಸ್ವೀಕರಿಸಿದ ಅಥವಾ ಸ್ವೀಕರಿಸಬಹುದಾದ ಯಾವುದೇ ಮೊತ್ತವು ಕ್ಲೇಮುದಾರರಿಗೆ ಬರಬಹುದಾದರೂ ಅದನ್ನು, ಕಡಿತಗೊಳಿಸಲು ಅರ್ಹವಾಗಿದೆಯೆಂಬ ಆರ್ಥಿಕ ಅನುಕೂಲದಂತೆ ಭಾವಿಸತಕ್ಕದ್ದಲ್ಲ. ಆದಾಗ್ಯೂ, ಈ ಮೊಕದ್ದಮೆಯಲ್ಲಿರುವಂತೆ ವೈದ್ಯಕೀಯ ವೆಚ್ಚಗಳ ಅಡಿಯಲ್ಲಿರುವ ಇತರ ಸಾಂಪ್ರದಾಯಿಕ ಶೀರ್ಷಿಕೆಗಳಲ್ಲಿ ವಿಮೆಯನ್ನು ಪಡೆದುಕೊಂಡಿರುವ ಪ್ರಕರಣಗಳಲ್ಲಿ ಇದೇ ತತ್ವವು ಅನ್ವಯವಾಗುವುದಿಲ್ಲ. ವೈದ್ಯಕೀಯ ವೆಚ್ಚಕ್ಕಾಗಿ ಪಾಲಿಸಿಯನ್ನು ತೆಗೆದುಕೊಂಡಿರುವಾಗ ಕ್ಲೇಮುದಾರನು ಅದನ್ನು ಪಾಲಿಸಿಯ ಅಡಿಯಲ್ಲಿ ಪಡೆದುಕೊಳ್ಳಲು ಬದ್ಧನಾಗಿರುತ್ತಾನೆ. ಮೋಟಾರು ವಾಹನಗಳ ಅಧಿನಿಯಮದ ಮೇರೆಗಿನ ಕ್ಲೇಮಾಗಿದ್ದಲ್ಲಿ, ಕ್ಲೇಮುದಾರನು ವೈದ್ಯಕೀಯ ವೆಚ್ಚಗಳಿಗೆ ಹಕ್ಕುಳ್ಳವನಾಗಿರುತ್ತಾನೆ. ಹೇಗೆ ಆದಾಗ್ಯೂ ಅದೇ ಮೊತ್ತವನ್ನು ಎರಡು ಬಾರಿ ಪಡೆದುಕೊಳ್ಳಲು ಸಾಧ್ಯವಿಲ್ಲ, ಹಾಗಾಗಿ ಈ ಮೊತ್ತವು ಆರ್ಥಿಕ ಅನುಕೂಲತೆ ಮೊತ್ತವಾಗುತ್ತದೆ. ಅಲ್ಲದಿದ್ದಲ್ಲಿ, ಕ್ಲೇಮುದಾರರು, ಒಂದೇ ಶೀರ್ಷಿಕೆಯಡಿ ಎರಡು ಬಾರಿ ಸಂದಾಯವನ್ನು ಪಡೆದಂತಾಗುತ್ತದೆ. ಮರಣದ ಸಂಬಂಧದಲ್ಲಿ ***ಹೆಲನ್ ಸಿ.ರೆಬೆಲೋ*** ಮೊಕದ್ದಮೆಯಲ್ಲಿ ಪ್ರತ್ಯೇಕತೆಯನ್ನು ಹೊಂದಿರುವ ಬೇರೆಯದೇ ಉದ್ದೇಶಕ್ಕೆ ಪಡೆದುಕೊಂಡು ಪಾಲಿಸಿಯಾಗಿರುವಾಗ, ಅದನ್ನು ಆರ್ಥಿಕ ಅನುಕೂಲತೆಯೆಂದು ಭಾವಿಸಲಾಗದು. ಅಂತೆಯೇ ಇತರ ಶೀರ್ಷಿಕೆಗಳ ಮೇಲೆ ಕ್ಲೇಮುದಾರನು ಪಡೆದುಕೊಳ್ಳುವ ಆರ್ಥಿಕ ಅನುಕೂಲತೆಯೆಂದು ಪರಿಗಣಿಸಲಾಗದು. ಆದುದರಿಂದ, ಕ್ಲೇಮುದಾರರು ಮತ್ತೊಂದು ಪಾಲಿಸಿಯ ಮೂಲಕ ಅಂಥ ವೈದ್ಯಕೀಯ ವೆಚ್ಚಗಳನ್ನು ಪಡೆದುಕೊಂಡಿದ್ದಾಗ್ಯೂ ಸಹಾ ವಿಮಾಕಂಪನಿಯು ಆ ವೈದ್ಯಕೀಯ ವೆಚ್ಚಗಳನ್ನೂ, ಭರಿಸಬೇಕೆನ್ನುವುದನ್ನು ಎತ್ತಿಹಿಡಿದಿರುವ ***ಶಾಹೀದ್ ಅಹ್ಮದ್*** ಮೊಕದ್ದಮೆಯಲ್ಲಿನ ತೀರ್ಪು ಕಾನೂನಿನಲ್ಲಿ ದೋಷಪೂರ್ಣವಾದುದೆಂದು ನಮ್ಮ

ಪರಿಗಣಿತ ಅಭಿಪ್ರಾಯವಾಗಿದೆ. ಆದುದರಿಂದ, ***ಹೆಲನ್ ಸಿ.ರೆಬೆಲೋ*** ಮೊಕದ್ದಮೆಯ ಹಾಗೆಯೇ ***ಬಿ.ಪರಿಮಳ ಮತ್ತು ಇತರರು*** ಮೊಕದ್ದಮೆಯ ತೀರ್ಪುಗಳನ್ನು ಸರಿಯಾಗಿ ಪರಿಭಾವಿಸಿಕೊಂಡಿಲ್ಲವೆಂಬುದು ನಮ್ಮ ಪರಿಗಣಿತ ದೃಷ್ಟಿಯಾಗಿದೆ. ನಾವು, ಆದುದರಿಂದ, ***ಶಾಹಿದ್ ಅಹ್ಮದ್*** ಮೊಕದ್ದಮೆಯಲ್ಲಿನ ತೀರ್ಪು ಕಾನೂನಿನಲ್ಲಿ ದೋಷಪೂರ್ಣವೆಂದು ಎತ್ತಿಹಿಡಿದಿದ್ದೇವೆ. ಮೆಡಿಕ್ಲೇಮ್ ಪಾಲಿಸಿ ಅಥವಾ ವೈದ್ಯಕೀಯ ವೆಚ್ಚಗಳನ್ನು ಒಳಗೊಳ್ಳುವ ಯಾವುದೇ ಇತರ ವೈದ್ಯಕೀಯ ಪಾಲಿಸಿಯ ಮುಖಾಂತರ ಕ್ಲೇಮುದಾರರು ವೈದ್ಯಕೀಯ ವೆಚ್ಚಗಳನ್ನು ಸ್ವೀಕರಿಸಿದ್ದ ಸಂದರ್ಭದಲ್ಲಿ, ವಿಮಾಕಂಪನಿಯು ಕ್ಲೇಮುದಾರರಿಗೆ ವೈದ್ಯಕೀಯ ವೆಚ್ಚಗಳನ್ನು ಪಾವತಿಸಲು ಬದ್ಧವಾಗಿರುವುದಿಲ್ಲ.

9. ಇತರ ವಿವಿಧ ಶೀರ್ಷಿಕೆಗಳ ಬಗ್ಗೆ ನ್ಯಾಯಾಧಿಕರಣದ ತೀರ್ಪು ಸಂಬಂಧಪಡುವಷ್ಟರ ಮಟ್ಟಿಗೆ, ಇದನ್ನು ಸೂಕ್ತವಾಗಿ ಹೆಚ್ಚಿಸಬೇಕಾದ ಅವಶ್ಯಕತೆಯಿದೆಯೆಂದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ. ಕ್ಲೇಮುದಾರನು ಮಾಜಿ ಸೈನಿಕನಾಗಿದ್ದಾನೆ ಮತ್ತು ಎಸ್.ಆರ್.ಆಟೋಮೊಬೈಲ್ಸ್ ಎಂಬ ಹೆಸರಿನಲ್ಲಿ ಆಟೋಮೊಬೈಲ್ ವ್ಯಾಪಾರವನ್ನು ನಡೆಸುತ್ತಿದ್ದನು ಹಾಗೂ ಮಾಸಿಕ 20,000/– ರೂ.ಗಳ ಆದಾಯವನ್ನು ಗಳಿಸುತ್ತಿದ್ದನೆಂದು ಕ್ಲೇಮು ಮಾಡಿದ್ದಾನೆ. ಈ ಕ್ಲೇಮನ್ನು ಸಮರ್ಥಿಸುವಂಥ ಯಾವುದೇ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸಿರುವುದಿಲ್ಲ. ನ್ಯಾಯಾಧಿಕರಣವು, ಅಂದಾಜಿನ ಮೇಲೆ ಮಾಸಿಕ 4,000/– ರೂ.ಗಳ ಆದಾಯವನ್ನು ಅನ್ವಯಿಸಿಕೊಂಡಿದೆ. ನಮ್ಮ ದೃಷ್ಟಿಯಲ್ಲಿ ಇದು ಯುಕ್ತವಾದುದಾಗಿರುವುದಿಲ್ಲ. ಸರ್ವೋಚ್ಚ ನ್ಯಾಯಾಲಯವು, ***ರಾಮಚಂದ್ರಪ್ಪ –ವಿರುದ್ಧ– ಮ್ಯಾನೇಜರ್, ರಾಯಲ್ ಸುಂದರಮ್ ಅಲೈಯನ್ಸ್ ವಿಮಾಕಂಪನಿ ನಿಯಮಿತ*** [4], ಮೊಕದ್ದಮೆಯಲ್ಲಿ ನೀಡಿರುವ ತೀರ್ಪಿನ ಅನುಸಾರ, ಅಂದಾಜು ಆದಾಯವನ್ನು ಮಾಸಿಕ 6,000/– ರೂ.ಗಳೆಂದು ಅಭಿಪ್ರಾಯಪಟ್ಟಿರುವುದು ಯುಕ್ತವಾದುದಾಗಿದೆ.

10. ವೈದ್ಯರ ಸಾಕ್ಷ್ಯದ ಪ್ರಕಾರವಾಗಿ, ಅಂಗವೈಕಲ್ಯವನ್ನು ಶೇಕಡಾ 10 ಎಂದು ನಿರ್ಧರಿಸಲಾಗಿದ್ದು ಅದನ್ನು ಒಪ್ಪಿಕೊಳ್ಳಲಾಗಿದೆ. ನ್ಯಾಯಾಧಿಕರಣದಿಂದ

4. ಎಐಆರ್ 2011 ಎಸ್‌ಸಿ 2951

ಅನ್ವಯ ಮಾಡಲಾಗಿರುವ ಗುಣಕವು ಸೂಕ್ತವಾಗಿದೆ. ಈ ಸನ್ನಿವೇಶಗಳಲ್ಲಿ ಗಳಿಸುವ ಸಾಮರ್ಥ್ಯದ ನಷ್ಟಕ್ಕಾಗಿನ ಮೊತ್ತವನ್ನು ರೂ. 6000x12x14x10%=1,00,800 ಎಂದು ನಿಗದಿಪಡಿಸಲಾಗಿದೆ. ಇದರ ಜೊತೆಗೆ ಕ್ಲೇಮುದಾರನು ನೋವು ಮತ್ತು ಯಾತನೆಗಾಗಿ ರೂ. 30,000/– ರೂ.ಗಳಿಗೆ ಹಕ್ಕುಳ್ಳವನಾಗಿದ್ದಾನೆಂದು ನಿಗದಿಪಡಿಸಲಾಗಿದೆ. ಕ್ಲೇಮುದಾರನು ಆರು ತಿಂಗಳುಗಳ ಕಾಲ ಕೆಲಸ ಮಾಡಲು ಅಸಮರ್ಥನಾಗಿದ್ದಾನೆ. ಹಾಗಾಗಿ 36,000/– ರೂ.ಗಳ ಮೊತ್ತವನ್ನು (ರೂ. 6,000 x 6) ಈ ಅವಧಿಗಾಗಿ ನಷ್ಟದ ಆದಾಯವೆಂದು ಐತೀರ್ಪು ನೀಡಲಾಗಿದೆ. ಸವಲತ್ತುಗಳ ನಷ್ಟಕ್ಕಾಗಿನ 5,000/– ರೂ.ಗಳನ್ನು ನೀಡಿದ್ದ ಮೊತ್ತವು ಕಡಿಮೆಯದೆಂದು ಅದನ್ನು 30,000/– ರೂ.ಗಳ ಮೊತ್ತಕ್ಕೆ ಹೆಚ್ಚಿಸಲಾಗಿದೆ. ವೈದ್ಯಕೀಯ ಮತ್ತು ಮತ್ತಿತರ ಆಕಸ್ಮಿಕ ವೆಚ್ಚಗಳಿಗಾಗಿ ನಿಗದಿಪಡಿಸಿರುವ ಮೊತ್ತವು ಸೂಕ್ತವಾದುದಾಗಿದ್ದು ಯಾವುದೇ ಹಸ್ತಕ್ಷೇಪದ ಅಗತ್ಯವಿಲ್ಲ. ಹಾಗಾಗಿ ನಷ್ಟಪರಿಹಾರವನ್ನು ಈ ಮುಂದಿನಂತೆ ಐತೀರ್ಪು ನೀಡಲಾಗಿದೆ :

| | | |
|---|---|---|
| 1. | ಗಳಿಸುವ ಸಾಮಥ್ಯ ನಷ್ಟಕ್ಕಾಗಿ | ರೂ. 1,00,800/– |
| 2. | ನೋವು ಮತ್ತು ಯಾತನೆ | ರೂ. 60,000/– |
| 3. | ಚಿಕಿತ್ಸೆ ಪಡೆಯುತ್ತಿದ್ದ ಅವಧಿಯಲ್ಲಿ ಆದಾಯದ ನಷ್ಟಕ್ಕಾಗಿ | ರೂ. 36,000/– |
| 4. | ಸವಲತ್ತುಗಳ ನಷ್ಟಕ್ಕಾಗಿ | ರೂ. 35,000/– |
| 5. | ವೈದ್ಯಕೀಯ ಮತ್ತು ಆಕಸ್ಮಿಕ ವೆಚ್ಚಗಳು | ರೂ. 50,000/– |
| | ಒಟ್ಟು | ರೂ. 2,81,000/– |

11. ತದನುಸಾರವಾಗಿ, ಕ್ಲೇಮುದಾರನು ಹೆಚ್ಚಿಸಲಾದ ರೂ. 1,05,600/– ರೂ.ಗಳ (ರೂ. 2,81,800/– – ರೂ. 1,76,200) ನಷ್ಟಪರಿಹಾರಕ್ಕೆ ಅರ್ಹನಾಗಿದ್ದಾನೆ,

ಹಾಗೂ ಇದು, ಅರ್ಜಿಯ ಕ್ಲೇಮಿನ ದಿನಾಂಕದಿಂದ ನಗದೀಕರಣಗೊಳ್ಳುವವರೆಗಿನ ದಿನಾಂಕದವರೆಗೆ ಶೇಕಡಾ ವಾರ್ಷಿಕ 9ರಷ್ಟು ಬಡ್ಡಿಯನ್ನು ಸಹಾ ಒಳಗೊಂಡಿರುತ್ತದೆ, ಇದನ್ನು ಈ ತೀರ್ಪಿನ ಪ್ರತಿ ತಲುಪಿದ ದಿನಾಂಕದಿಂದ ಎಂಟು ವಾರಗಳ ಒಳಗಾಗಿ ಸಂದಾಯ ಮಾಡತಕ್ಕದ್ದು.

12. ಪರಿಣಾಮವಾಗಿ, ಎಂ.ಎಫ್.ಎ. ಸಂ. 8451/2012ನ್ನು ವಜಾಗೊಳಿಸಿದೆ ಮತ್ತು ಎಂ.ಎಫ್.ಎ. ಸಂ. 9190/2012ನ್ನು ಭಾಗಶಃ ಮೇಲಿನ ಷರತ್ತುಗಳೊಂದಿಗೆ ಅನುಮತಿಸಿದೆ.

13. ಈ ನ್ಯಾಯಾಲಯದ ಮುಂದೆ ಠೇವಣಿ ಮೊತ್ತವೇನಾದರೂ ಇದ್ದಲ್ಲಿ ಅದನ್ನು ಠೇವಣಿಗೆ ರವಾನಿಸಲು ಮತ್ತು ನ್ಯಾಯಾಧಿಕರಣಕ್ಕೆ ದಾಖಲೆಗಳನ್ನು ತಕ್ಷಣವೇ ಕಳುಹಿಸುವುದಕ್ಕೆ ರಿಜಿಸ್ಟ್ರಾರ್ ಕಚೇರಿಗೆ ನಿರ್ದೇಶಿಸಲಾಗಿದೆ.

---